ಹೆಚ್ಚುವರಿ ದಿವಾಣಿ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ ಹುಮನಾಬಾದ.

ಓ.ಎಸ್. ನಂ.168/2022
ಪಿ. ಡಬ್ಲ್ಯೂ-01

ದಿನಾಂಕಃ 09-01-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪ್ರತಿವಾದಿ ಪ್ರತಿವಾದ ಪತ್ರ ವನ್ನು ಸಲ್ಲಿಸಿದ ನಂತರ ವಿವಾದಂಶವನ್ನು ರಚಿಸಿದ್ದು ತದನಂತರ ವಾದಿಯ ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ. ಬಿ.ಜಿ.ಪಿ. ವಾದಿ ಪರ ವಕೀಲರಿಂದಃ

ನನ್ನ ಪ್ರಕರಣಕ್ಕೆ ಪೂರಕವಾಗಿ ಕೆಲವು ದಾಖಲೆಗಳನ್ನು ಹಾಜರು ಪಡಿಸಿರುತ್ತೇನೆ.

ಈಗ ನೋಡುತ್ತಿರುವ ದಾಖಲೆಯು ಪ್ರತಿವಾದಿಯು ನನ್ನ ಹೆಸರಿನಲ್ಲಿ ಮಾಡಿದ ಶಪತ ಪತ್ರದ ದೃಢಿಕೃತ ಪ್ರತಿಯಾಗಿರುತ್ತದೆ ಅದನ್ನು ಈಗ ನಿಪಿ.-6 ಎಂದು ಗುರುತಿಸಲಾಯಿತು.

ಈಗ ನೋಡುತ್ತಿರುವ ದಾಖಲೆಯು ನನ್ನ ಹೆಸರಿನಲ್ಲಿರುವ ರಸೀದಿಯ ದೃಢಿಕೃತ ಪ್ರತಿಯಾಗಿರುತ್ತದೆ ಅದನ್ನು ಈಗ ನಿ.ಪಿ.-7 ಎಂದು ಗುರುತಿಸಲಾಯಿತು.

ಈಗ ನೋಡುತ್ತಿರುವ ದಾಖಲೆಯು ನನ್ನ ಹೆಸರಿನಲ್ಲಿರುವ ಚಲನನ ದೃಢಿಕೃತ ಪ್ರತಿಯಾಗಿರುತ್ತದೆ ಅದನ್ನು ಈಗ ನಿ.ಪಿ.-8 ಎಂದು ಗುರುತಿಸಲಾಯಿತು.

ಈಗ ನೋಡುತ್ತಿರುವ ದಾಖಲೆಯು ನೋಟಿಸಿನ ದೃಢಿಕೃತ ಪ್ರತಿಯಾಗಿರುತ್ತದೆ ಅದನ್ನು ಈಗ ನಿ.ಪಿ.-9 ಎಂದು ಗುರುತಿಸಲಾಯಿತು.

ಈಗ ನೋಡುತ್ತಿರುವ ದಾಖಲೆಯು ಪ್ರತಿವಾದಿಯು ದಿ :09-10-2003 ರಂದು ತಶಿಲ್ದಾರ ಇವರಿಗೆ ನೀಡಿದ ಅರ್ಜಿಯ ದೃಢಿಕೃತ ಪ್ರತಿಯಾಗಿರುತ್ತದೆ ಅದನ್ನು ಈಗ ನಿ.ಪಿ.-10 ಎಂದು ಗುರುತಿಸಲಾಯಿತು.

ಈಗ ನೋಡುತ್ತಿರುವ ದಾಖಲೆಯು ಪಹಣಿ ಪತ್ರಿಕೆಯ ದೃಢಿಕೃತ ಪ್ರತಿಯಾಗಿರುತ್ತದೆ ಅದನ್ನು ಈಗ ನಿ.ಪಿ.-11 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಮತ್ತು ಅವರ ಪರ ವಕೀಲರನ್ನು ಕೂಗಿ ಕರೆಸಲಾಗಿ ಗೈರ ಹಾಜರಿದ್ದು ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಅ.

ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ,
ನ್ಯಾಯಿಕ ದಂಡಾಧಿಕಾರಿಗಳು, ಹುಮನಾಬಾದ.

ಹೆಚ್ಚುವರಿ ದಿವಾಣಿ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ ಹುಮನಾಬಾದ.

ಓ.ಎಸ್. ನಂ.168/2022
ಪಿ. ಡಬ್ಲ್ಯೂ-01

ದಿನಾಂಕಃ 19-07-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಶ್ರೀ. ಬಿ.ಜಿ.ಪಿ. ವಾದಿ ಪರ ವಕೀಲರಿಂದಃ

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸಿರುತ್ತೇನೆ. ಸದರಿ ಪ್ರಮಾಣ ಪತ್ರದಲ್ಲಿ ಬರೆದಿರುವ ಸಂಗತಿಗಳು ನಿಜ ಮತ್ತು ಸರಿ ಇರುತ್ತವೆ, ಸದರಿ ಪ್ರಮಾಣ ಪತ್ರಕ್ಕೆ ನಾನೇ ಸಹಿ ಮಾಡಿರುತ್ತೇನೆ.

ಈಗ ನೋಡುತ್ತಿರುವ ದಾಖಲೆಯು ನಾನು ಖರೀದಿಸಿದ ದಾವ ಸ್ವತ್ತಿನ ಖರಿದಿ ಪತ್ರದ ದೃಢಿಕೃತ ಪ್ರತಿಯಾಗಿರುತ್ತದೆ ಅದನ್ನು ಈಗ ನಿ.ಪಿ.-1 ಎಂದು ಗುರುತಿಸಲಾಯಿತು.

ಈಗ ನೋಡುತ್ತಿರುವ ದಾಖಲೆಯು ಎಂ.ಇ. ನಂ.22 ರ ದೃಢಿಕೃತ ಪ್ರತಿಯಾಗಿರುತ್ತದೆ ಅದನ್ನು ಈಗ ನಿ.ಪಿ.-2 ಎಂದು ಗುರುತಿಸಲಾಯಿತು.

ಈಗ ನೋಡುತ್ತಿರುವ ದಾಖಲೆಯು ಎಂ.ಆರ್. ನಂ.8 ರ ದೃಢಿಕೃತ ಪ್ರತಿಯಾಗಿರುತ್ತದೆ ಅದನ್ನು ಈಗ ನಿ.ಪಿ.-3 ಎಂದು ಗುರುತಿಸಲಾಯಿತು.

ಈಗ ನೋಡುತ್ತಿರುವ ದಾಖಲೆಯು ಜಮೀನು ಸರ್ವೆ ನಂ.97/2 ಅ ನೇದರ ಪಹಣಿ ಪತ್ರಿಕೆ ಆಗಿರುತ್ತದೆ ಅದನ್ನು ಈಗ ನಿ.ಪಿ.-4 ಎಂದು ಗುರುತಿಸಲಾಯಿತು.

ಈಗ ನೋಡುತ್ತಿರುವ ದಾಖಲೆಯು ಜಮೀನು ಸರ್ವೆ ನಂ.97/2 ನೇದರ ಪಹಣಿ

ಪತ್ರಿಕೆಯ ಮೊದಲನೆ ಪುಟ ಆಗಿರುತ್ತದೆ ಅದನ್ನು ಈಗ ನಿ.ಪಿ.-5 ಎಂದು ಗುರುತಿಸಲಾಯಿತು.

ಆದ್ದರಿಂದ ನನ್ನ ದಾವೆಯನ್ನು ಪುರಸ್ಕರಿಸಬೇಕಾಗಿ ವಿನಂತಿ.

ಪಾಟೀ ಸವಾಲುಃ ಪ್ರತಿ ವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು ಸೂಕ್ತ ಕಾರಣ ಇಲ್ಲದೇ ಇರುವ ಕಾರಣ ಹಾಗೂ ಪ್ರತಿವಾದ ಪತ್ರವನ್ನು ಸಲ್ಲಿಸದೇ ಇರುವ ಕಾರಣ ಅವರ ಮನವಿಯನ್ನು ತಳ್ಳಿ ಹಾಕಿ ಯಾವುದೇ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಅ.

ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ,
ನ್ಯಾಯಿಕ ದಂಡಾಧಿಕಾರಿಗಳು, ಹುಮನಾಬಾದ.



ಹೆಚ್ಚುವರಿ ದಿವಾಣಿ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ ಹುಮನಾಬಾದ.

ಓ.ಎಸ್. ನಂ.168/2022
ಪಿ. ಡಬ್ಲ್ಯೂ-01

ದಿನಾಂಕಃ 05-04-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿ ವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು ಸೂಕ್ತ ಕಾರಣ ಇಲ್ಲದೇ ಇರುವ ಕಾರಣ ಅವರ ಮನವಿಯನ್ನು ತಳ್ಳಿ ಹಾಕಿ ಯಾವುದೇ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಅ.

ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ,
ನ್ಯಾಯಿಕ ದಂಡಾಧಿಕಾರಿಗಳು, ಹುಮನಾಬಾದ.

ಹೆಚ್ಚುವರಿ ದಿವಾಣಿ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ ಹುಮನಾಬಾದ.

ಓ.ಎಸ್. ನಂ.168/2022
ಪಿ. ಡಬ್ಲ್ಯೂ-01

ದಿನಾಂಕಃ 04-12-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ ಶ್ರೀ. ಬಿ.ಎಸ್.ಎನ್. ಪ್ರತಿ ವಾದಿ ಪರ ವಕೀಲರಿಂದ:</u>

ನಾನು 4 ನೇ ತರಗತಿಯವರೆಗೆ ಓದಿರುತ್ತೇನೆ. ನಾನು 1958 ರಲ್ಲಿ ಜನಿಸಿರುತ್ತೇನೆ. ನನ್ನ ತಂದೆಯ ಹೆಸರು ಶರಣಪ್ಪಾ ನನ್ನ ತಂದೆಗೆ ಇಬ್ಬರು ಹೆಂಡತಿಯರು ಎಂದರೆ ಸರಿ. ನಮ್ಮ ತಾಯಿಯ ಹೆಸರು ರತ್ನಮ್ಮಾ ನನ್ನ ಮಲತಾಯಿಯ ಹೆಸರು ಶಿವಮ್ಮಾ @ ಲಕ್ಷ್ಮೀ@ ಸಮ್ಮವ್ವ ಅಂತಾ ಇರುತ್ತದೆ.  ನನ್ನ ತಾಯಿಗೆ ನಾನು ಒಬ್ಬನೇ ಮಗ ಮತ್ತು ಇಬ್ಬರು ಹೆಣ್ಣು ಮಕ್ಕಳು ಇರುತ್ತೇವೆ. ಶಿವಮ್ಮ ಇವರಿಗೆ 6 ಜನ ಗಂಡು ಮಕ್ಕಳು 3 ಜನ ಹೆಣ್ಣು ಮಕ್ಕಳು ಇರುತ್ತಾರೆ. ನನ್ನ ಅಕ್ಕ ತಂಗಿಯರ ಹೆಸರು ಶಾರದಾ ಮತ್ತು ಕಮಲಾಬಾಯಿ.

ಶಿವಮ್ಮ ಇವರ ಮಕ್ಕಳ ಹೆಸರು ವಸಂತ, ರೇಣುಕಾ, ಮಹಾನಂದಾ ಹೆಣ್ಣು ಮಕ್ಕಳು, ಪ್ರಭು, ಸಿದ್ದಪ್ಪಾ ಆನಂದ, ಗೌತಮ, ರಾಹುಲ ಮತ್ತು ಮಿಥುನ ಅಂತಾ ಇರುತ್ತಾರೆ. ಅವರೆಲ್ಲರೂ ಜೀವಂತವಾಗಿ ಇರುತ್ತಾರೆ. ನಮ್ಮ ತಾಯಂದಿರು ಸಹ ಜೀವಂತವಾಗಿರುತ್ತಾರೆ. ಸದರಿ ದಾವೆಯನ್ನು ನಾನು ಪ್ರಭು ಇತನ ಮೇಲೆ ಕೇಸ ಮಾಡಿರುತ್ತೇನೆ. ನನಗೆ ಆಸ್ತಿ ಬೇಕು ಅಂತಾ ಕೇಸ ಮಾಡಿರುತ್ತೇನೆ. ದಾವಾ ಆಸ್ತಿ ಸರ್ವೆ ನಂ.97/2/ಅ ಇರುತ್ತದೆ. ಸರ್ವೆ ನಂ.97 ಒಟ್ಟು 15 ಎಕರೆ 24 ಗುಂಟೆ ಇರುತ್ತದೆ. ನಮ್ಮ ತಂದೆ ನಾವು ಸೇರಿ 15 ಎಕರೆ 24 ಗುಂಟೆ ಜಮೀನವನ್ನು ಖರೀದಿ ಮಾಡಿರುತ್ತೇವೆ. ಸದರಿ ಆಸ್ತಿಯನ್ನು 1979 ರಲ್ಲಿ ಖರೀದಿ ಮಾಡಿರುತ್ತೇವೆ. ಸದರಿ ಆಸ್ತಿಯನ್ನು ಹಣಮಂತರಾವ ತಂದೆ ಶಿವಪ್ಪಾ ತಂದೆ ನಾಗಪ್ಪಾ ಇವರಿಂದ ಖರೀದಿ ಮಾಡಿರುತ್ತೇವೆ. ಆಗ ಮಾರಾಟ ಮಾಡಿದವರ ವಯಸ್ಸು 15 ವರ್ಷ ಇತ್ತು. ಅವರ ತಂದೆ ಮತ್ತು ಮಗ ಸೇರಿ ಮಾರಾಟ ಮಾಡಿರುತ್ತಾರೆ.

ಹಣಮಂತ ಇವರ ತಂದೆಯ ವಯಸ್ಸು ನನಗೆ ನೆನಪಿಲ್ಲ. ಸದರಿ ದಾವಾ ಆಸ್ತಿಯನ್ನು ರೂ.3000/-ಗಳಿಗೆ ಖರೀದಿ ಮಾಡಿರುತ್ತೇವೆ. ಖರೀದಿ ಮಾಡಿದ ದಿನಾಂಕ ನನಗೆ ನೆನಪಿಲ್ಲ. ಆಗ ಬೇಸಿಗೆ ಕಾಲವಿತ್ತು. ಆ ಸಮಯದಲ್ಲಿ ನಾನು ಬಾಂಬೆಯಲ್ಲಿ ಕೂಲಿ ಕೆಲಸ ಮಾಡುತ್ತಾ ಇದ್ದೆನು. ನಾನು 1974 ರಲ್ಲಿ ಬಾಂಬೆಗೆ ಹೋಗಿದ್ದೆನು. ನಾನು ಬಾಂಬೆಗೆ ಹೋಗುವ ಸಮಯದಲ್ಲಿ ನಾನು 10 ವರ್ಷದವನಿದ್ದೆನು. ಈಗಲೂ ನಾನು ಬಾಂಬೆಯಲ್ಲಿರುತ್ತೇನೆ. ಬಾಂಬೆಯಲ್ಲಿ ನನ್ನ ಹೆಸರಿನಲ್ಲಿ ಮತ್ತು ನನ್ನ ತಂದೆಯ ಹೆಸರಿನಲ್ಲಿ ಮನೆಗಳು ಇರುತ್ತವೆ.

ನನ್ನ ತಂದೆ ಸನ್ 2014 ರಲ್ಲಿ ತೀರಿಕೊಂಡಿರುತ್ತಾರೆ. ಈಗಲೂ ನಾವು ಕೂಡಿ ಇರುತ್ತೇವೆ ಎಂದರೆ ಸಾಕ್ಷಿಯು ನಮ್ಮ ತಾಯಿ ಬಂದಾಗಿನಿಂದ ನಾವು ಪ್ರತ್ಯೇಕವಾಗಿ ಇರುತ್ತೇವೆ ಎಂದು ನುಡಿಯುತ್ತಾರೆ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಅ.

ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ,
ನ್ಯಾಯಿಕ ದಂಡಾಧಿಕಾರಿಗಳು, ಹುಮನಾಬಾದ.